ಯೋಜನೆ, ಮನದಲ್ಲೆಲ್ಲೋ ಅವಿತುಕೊಂಡಿದ್ದ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬ ಆಸೆ ಉತ್ಕಟವಾಯಿತು. ಆದರೆ ಇದಕ್ಕೆ ತನ್ನ ಗಂಡನ ಸಂಪೂರ್ಣ ಸಹಕಾರ ಬೇಕು ಎಂದು ಸುಧಾಳಿಗೆ ತಿಳಿದಿತ್ತು.

ಮನೆಗೆ ಹಿಂದಿರುಗಿದ ಸುಧಾ ತನ್ನ ಗಂಡನಿಗೆ 'ಇನ್ನು ಮೂರು ನಾಲ್ಕು ತಿಂಗಳುಗಳಲ್ಲಿ ನಿಮ್ಮ ಮಾವನವರು ತಮ್ಮ ಆಸ್ತಿಯನ್ನು ಹಂಚುವ ಬಗ್ಗೆ ನಿಮಗೆ ತಿಳಿಸುತ್ತಾರೆ' ಎಂದಳು.

ವಿಚಲಿತನಾದ ಅವನು 'ಅಪ್ಪ ಅಮ್ಮನ್ನ ನೋಡಿಕೊಂಡು, ಮಾತನಾಡಿಸಿಕೊಂಡು ಬರ್ತೀನಿ ಅಂತ ಹೇಳಿ ಹೋಗಿದ್ದೆ. 'ಆಸ್ತಿಯಲ್ಲಿ ಪಾಲು ಕೇಳಲು' ಅಂತ ಹೇಳಿದ್ದರೆ ನಾನು ಕಳುಹಿಸುತ್ತಲೇ ಇರಲಿಲ್ಲ. ಮೊದಲೇ ಮಗ ಮಾತನಾಡುತ್ತಿಲ್ಲ ಅಂತ ಅವರು ನೊಂದುಕೊಂಡಿದ್ದಾರೆ. ಅವರಿಗೆ ಮತ್ತಷ್ಟು ನೋವುಕೊಡಲು ನಿನಗೆ ಹೇಗೆ ಮನಸ್ಸು ಬಂತು?' ಎಂದು ಆಕ್ಷೇಪಿಸಿದ.

ಅಲ್ಲಿ ನಡೆದ ಸಂಗತಿಯನ್ನು ಗಂಡನಿಗೆ ಸಂಪೂರ್ಣವಾಗಿ ತಿಳಿಸಿ, ತನ್ನ ತಾಯಿ ಹಾಗೂ ಅತ್ತಿಗೆ ಮಾಡಿದ್ದ ಸ್ಪೆಷಲ್ ಸಿಹಿ ಹಾಗೂ ಖಾರದ ತಿಂಡಿಗಳನ್ನು ಗಂಡನಿಗೆ ಕೊಟ್ಟಳು.

'ಒಳ್ಳೆಯ ಕೆಲಸ ಮಾಡಿದೆ. ಮಾವನವರಿಗಂತೂ ಬಹಳ ಸಂತೋಷವಾಗಿರಬೇಕು. ಆದರೆ ಆಸ್ತಿ ಹಂಚುವ ವಿಚಾರ ಈಗ ಎಲ್ಲಿಂದ ಬಂತು?' ಅವಳ ಗಂಡ ಪ್ರಶ್ನಿಸಿದ.

'ಅದು ಇಂದು ನಡೆದ ಘಟನೆಯ ಮುಂದುವರಿದ ಭಾಗವಾಗುತ್ತೆ ಅಂತ ನನ್ನ ಮನಸ್ಸು ಹೇಳುತ್ತಿದೆ!' ಸುಧಾ ನಾಟಕೀಯವಾಗಿ ಉತ್ತರಿಸಿದಳು.

'ಈ ರೀತಿ ಭವಿಷ್ಯ ಹೇಳೋದನ್ನು ಯಾವಾಗಿನಿಂದ ಕಲಿತೆ?'

'ನಾನು ಮನಃಶಾಸ್ತ್ರದಲ್ಲಿ ಉತ್ತಮ ಅಂಕಗಳಿಂದ ಡಿಗ್ರಿ ಪಡೆದ ದಿನದಿಂದ! ಇಲ್ಲಾರೀ, ಅಮ್ಮ ಹೇಳಿದರು. 'ನಾವು ಗಟ್ಟಿಯಾಗಿ ಇರುವಾಗಲೇ ಆಸ್ತಿಯನ್ನು ಮಕ್ಕಳಿಗೆ ಹಂಚಿಬಿಡೋಣ' ಅಂತ ಅಪ್ಪ ಸ್ವಲ್ಪ ದಿನಗಳ ಹಿಂದೆ ಅಮ್ಮನಿಗೆ ಹೇಳಿದ್ದರಂತೆ. ಈ ಬಗ್ಗೆ ನಿಮ್ಮ ಹತ್ತಿರ ಮಾತಾಡಿ ಸಲಹೆ ಪಡೀಬೇಕು ಅಂತ ಇದಾರಂತೆ.'

'ನೋಡು, ನನ್ನನ್ನು ಕೇಳಿದರೆ ನಮಗೆ ಆ ಮನೆಯಲ್ಲಿ ಪಾಲು ಖಂಡಿತ ಬೇಡ. ನಮಗೆ ದೊಡ್ಡ ಮನೆ ಇದೆ, ಇನ್ನೊಂದು ಸೈಟು ಇದೆ. ನಿಮ್ಮ ಅಣ್ಣನಿಗೆ ಮನೆ ಇಲ್ಲ. ಅವನಿಗೆ ಆ ಮನೆಯನ್ನು ಕೊಟ್ಟುಬಿಡಲಿ. ಅವನೂ 'ನನಗೆ ಮನೆ ಇಲ್ಲ' ಎಂದು ಯೋಚನೆ ಮಾಡುವುದು ತಪ್ಪಿ, ತನ್ನ ಕುಟುಂಬ ಹಾಗೂ ತಂದೆತಾಯಿಯರ ಜೊತೆ ಆನಂದವಾಗಿ ಇರ್ತಾನೆ' ಎಂದು ತನ್ನ ನಿರ್ಧಾರ ತಿಳಿಸಿದ.

ಸುಧಾಳಿಗೂ ತನ್ನ ಇನ್ನೊಂದು ಯೋಜನೆಯೂ ಕಾರ್ಯಗತವಾಗುತ್ತದೆ ಎಂಬ ಭರವಸೆ ಸಿಕ್ಕಿಬಿಟ್ಟಿತ್ತು. ಅವಳು ಪ್ರೀತಿಯಿಂದ ತನ್ನ ಗಂಡನನ್ನು ಅಪ್ಪಿ ಮುದ್ದಾಡಿಬಿಟ್ಟಳು.

***

ತನ್ನ ಅಪ್ಪ ಕೇಳಿದ ಒಂದು ಸಣ್ಣ ಪ್ರಶ್ನೆ, ಮಗನ ಮನಸ್ಸಿನಲ್ಲಿ ಎಂಥ ಪರಿಣಾಮ ಉಂಟು ಮಾಡಬಹುದು ಎಂಬುದನ್ನು ಕಣ್ಣಾರೆ ಕಂಡಿದ್ದ



ಸುಧಾ, ತನ್ನ ಮಗಳ ಜೊತೆ ಸಂಘರ್ಷದ ಸಮಯ ಬಂದಾಗಲೆಲ್ಲ ಬಹಳ ಎಚ್ಚರ ವಹಿಸುತ್ತಿದ್ದಳು. ಅಂಥ ಸಂದರ್ಭಗಳಲ್ಲಿ ಸಮಚಿತ್ತದಿಂದ ಇದ್ದು ಪರಿಸ್ಥಿತಿಯನ್ನು ನಿರ್ವಹಿಸುವುದನ್ನು ಅವಳು ಕರಗತ ಮಾಡಿಕೊಂಡಿದ್ದಳು.

'ನೀನು ವಿಡಿಯೊ ಕಳಿಸು. ಆದರೆ ಅದು ಬೆಸ್ಟ್ ಆಗಿರಬೇಕಲ್ವಾ?' ತಾಯಿ ಕೇಳಿದಾಗ, ಅಳುವುದನ್ನು ನಿಲ್ಲಿಸಿ ಮೂಗನ್ನು ಸೊರೆದುಕೊಳ್ಳುತ್ತಿದ್ದ ಪ್ರಿಯಾ ತಲೆ ಆಡಿಸಿದಳು.

'ಹಾಗಿದ್ರೆ ಬಾ ಇಲ್ಲಿ ಮಾತಾಡೋಣ' ಎಂದಾಗ, ಮಗಳು 'ಸಾರಿ ಅಮ್ಮ' ಎಂದು ಬಂದು ಅವಳನ್ನು ಅಪ್ಪಿಕೊಂಡಿದ್ದಳು.

'ನಾವು ಏನೇ ಮಾಡಿದರೂ ಉಳಿದವರು ಅದನ್ನು ಆಡಿಕೊಂಡು ನಗುವ ಹಾಗೆ ಇರಬಾರದು. ಅವರು ಹಾಗೆ ನಮ್ಮ ಮುಂದೆ ನಕ್ಕರೆ ನಮಗೆ ಬಹಳ ಅವಮಾನ, ದುಃಖ ಎಲ್ಲ ಆಗುತ್ತೆ. ಅದಕ್ಕಿಂತ ಹೆಚ್ಚಾಗಿ ನಮ್ಮ ಅಚ್ಚುಮೆಚ್ಚಿನ ಗೆಳತಿ ಆಗಬಹುದಾಗಿದ್ದವರನ್ನು ಶತ್ರುವಂತೆ ನೋಡಲು ಪ್ರಾರಂಭಿಸಿಬಿಡುತ್ತೇವೆ' ಸುಧಾ ಹೇಳಿದಳು.

'ಹೌದಮ್ಮ, ಈಗ ನಾನು ಏನು ವಿಡಿಯೊ ಮಾಡಲಿ?' ಪ್ರಿಯಾ ಕೇಳಿದಳು. 'ಸಾ ಪಾ ಸಾ ಅಂತ ಕೊರಿಬಾರ್ದು! ನೃತ್ಯನೇ ಮಾಡಬೇಕು' ಎಂದು ಸ್ನೇಹಿತೆಯರು ಹೇಳಿರುವುದು ತಿಳಿದ ಮೇಲೆ ಸುಧಾ ಇಕ್ಕಟ್ಟಿಗೆ ಸಿಲುಕಿದಳು.

ಯೋಚಿಸಿ, ಕೊನೆಗೆ 'ನೋಡು ನಿನ್ನ ವಿಡಿಯೊ ಬೆಸ್ಟ್ ಆಗಬೇಕಾದರೆ ಅಭಿನಯದ ಜೊತೆ ನಿನ್ನ ಧ್ವನಿ ಇರಬೇಕು. ಹಾಡು ಚೆನ್ನಾಗಿ ಹೇಳುವ ನೀನು ಅದರ ಪ್ರಯೋಜನ ಪಡೆದು ಸ್ವಲ್ಪ ಅಭಿನಯವನ್ನು ಸೇರಿಸು' ಎಂದು ಸುಧಾ ಹೇಳಿದಳು.

ಅನಂತರ 'ಶಾಂತಾಕಾರಂ ಭುಜಗಶಯನಂ' ಎಂಬ ಶ್ಲೋಕಕ್ಕೆ ನಿಂತ ಕಡೆಯೇ ಅಭಿನಯ ಮಾಡುವುದನ್ನು ಹೇಳಿಕೊಟ್ಟಳು. ಸುಶ್ರಾವ್ಯವಾಗಿ ಹಾಡುತ್ತಾ ಅಭಿನಯಿಸಿದ ಅವಳ ವಿಡಿಯೊ ಸ್ನೇಹಿತರನ್ನೆಲ್ಲ ಚಕಿತರನ್ನಾಗಿಸಿಬಿಟ್ಟಿತ್ತು. ಒಳ್ಳೆಯ ಹಿಟ್ ಕೂಡ ಆಯಿತು.

ತಾನು ಬಾಲಿಕಾ ಪ್ರೌಢಶಾಲೆಯಲ್ಲಿ ಕಲಿತದ್ದರಿಂದ ಹುಡುಗರನ್ನು ಕಂಡರೆ ಇದ್ದ ಭಯ ಹಿಂಜರಿಕೆಗಳು ತನ್ನ ಮಗಳಲ್ಲಿ ಬರುವುದು ಬೇಡ ಎಂದು ಪ್ರಿಯಾಳನ್ನು ಸಹಶಿಕ್ಷಣ ಶಾಲೆಗೆ ಸೇರಿಸಿದ್ದಳು. ಮಗಳು ಕಾಲೇಜಿನಲ್ಲಿ ಓದುವಾಗ ಸುಧಾಳ ಅರಿವಿನ ಪರಿಧಿ ಹೆಚ್ಚಾಯಿತು; ಹಾಗೆಯೇ ಅವಳ ಜವಾಬ್ದಾರಿ ಕೂಡ. ಹಲವು ಬಾರಿ ಪ್ರಪಂಚದ ಎಲ್ಲಾ ದುಷ್ಟಶಕ್ತಿಗಳು ತನ್ನ ಮಗಳ ಮೇಲೆ ದಾಳಿ ಮಾಡಲು ಕಾಯುತ್ತಿವೆ ಎನ್ನಿಸುತ್ತಿತ್ತು. ಅದಕ್ಕೆ ಮಿತಿಮೀರಿದ ಪ್ರತಿಕ್ರಿಯೆಯಾಗಿ ಮಗಳಿಗೆ ಗೊತ್ತಿಲ್ಲದಂತೆ ರಕ್ಷಾಕವಚ, ದಿಗ್ಬಂಧನಗಳನ್ನು ಹಾಕುತ್ತಿದ್ದೇನೆಯೇ? ಎಂದು ಕೆಲವು ಬಾರಿ ಅನಿಸಿದ್ದುಂಟು.

ಮಗಳಿಗೆ ಎಷ್ಟು ಸ್ವಾತಂತ್ರ್ಯ ಕೊಡಬೇಕು? ನಾನು ಈಗ ಮಾಡುತ್ತಿರುವುದರಿಂದ ಅವಳ ಸ್ವಾಭಾವಿಕ ಬೆಳವಣಿಗೆಗೆ ತೊಂದರೆಯಾಗುತ್ತಿದೆಯೆ? ಎಂಬ ದ್ವಂದ್ವವೂ ಆಗಾಗ ಕಾಡುತ್ತಿತ್ತು. ಅಂತಹ ಸಂದರ್ಭಗಳಲ್ಲಿ ಸುಧಾಳಿಗೆ ಇರುವ ಒಬ್ಬಳೇ ಮಗಳ ಜೊತೆಗೆ ಅವಳಿಗೆ ಒಬ್ಬ ತಮ್ಮನೋ ತಂಗಿಯೋ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸಿದ್ದು ಸಹಜ.

ಇವೆಲ್ಲದರ ಮಧ್ಯೆ ಆಗಾಗ ಮಗಳು ಬಾಯಿಪಾಠ ಮಾಡಿಕೊಂಡಂತೆ 'ಅಮ್ಮ ನಿನಗೆ ಏನೂ ಗೊತ್ತಾಗಲ್ಲ' ಎನ್ನುವುದನ್ನು ಮರೆಯದೇ ಹೇಳುತ್ತಿದ್ದಳು. ಆಗ ಮಗಳ ಹದಿಹರೆಯವು ಯಾವಾಗ ಮುಗಿಯುತ್ತದೆಯೋ ಎನ್ನಿಸಿಬಿಡುತ್ತಿತ್ತು. ಅದು ಮುಗಿದ ಮೇಲೂ ಮಗಳು ತನ್ನ ಬಾಯಿಪಾಠವನ್ನು ಮರೆಯದೇ ಇದ್ದಾಗ, ಇವಳು ನಿಜವಾಗಿ ಬೆಳೆಯುವುದು ಯಾವಾಗ ಎನ್ನಿಸಿಬಿಟ್ಟಿತ್ತು. ಅವಳ ಸ್ನೇಹಿತರ ತಾಯಂದಿರೊಡನೆ ಇವುಗಳ ಬಗ್ಗೆ ಮಾತುಕತೆಯಾದಾಗ 'ದೇಶದ ಮುಂದಿನ ಪೀಳಿಗೆಗೆ ಏನಾಗಿದೆ?' ಎನ್ನುವಲ್ಲಿಗೆ ಅದು ಬಂದು ನಿಲ್ಲುತ್ತಿತ್ತು.

***

ಅಂದು ಸಂಜೆ ಪ್ರಿಯಾ ಮತ್ತು ಅವಳ ಗಂಡ ಖುಷಿ ಖುಷಿಯಾಗಿ ಮನೆಗೆ ಬಂದರು. ಹಾಲಿನಲ್ಲಿ ಮಾತನಾಡುತ್ತ ಕುಳಿತಿರುವಾಗ, ಗಂಡ ಹೆಂಡತಿ ಇಬ್ಬರೂ ಪರಸ್ಪರ ನೋಟ ಹರಿಸಿಕೊಂಡು ಏನನ್ನೋ ಹೇಳಲು ಹವಣಿಸುತ್ತಿರುವುದು ಸುಧಾಳ ಕಣ್ಣಿಗೆ ಬಿತ್ತು. ಕಾಫಿ ತರುತ್ತೇನೆ ಎಂದು ಎದ್ದ ಸುಧಾಳ ಹಿಂದೆಯೇ ಅಡುಗೆ ಮನೆಗೆ ಬಂದ ಪ್ರಿಯಾಳನ್ನು 'ಏನು ಸಮಾಚಾರ? ಇಬ್ಬರು ಬಹಳ ಖುಷಿಯಾಗಿದ್ದೀರಿ. ಗಂಡನಿಗೆ ಪ್ರಮೋಷನ್ ಬಂತಾ?' ಎಂದು ಸುಧಾ ಕೀಟಲೆಯ ಧ್ವನಿಯಲ್ಲಿ ಕೇಳಿದಳು.

'ಹೋಗಮ್ಮ, ನಿನಗೆ ಏನೂ ಗೊತ್ತಾಗಲ್ಲ' ಎಂದ ಮಗಳನ್ನು ತಬ್ಬಿ 'ಹೌದಮ್ಮ ಏನೂ ಗೊತ್ತಾಗದೆ ನಿನ್ನನ್ನು ಇಷ್ಟು ದೊಡ್ಡವಳನ್ನಾಗಿ ಮಾಡಿದ್ದೀನಿ' ಎಂದು, ಮಗಳ ಕಿವಿಯಲ್ಲಿ 'ಎಷ್ಟು ತಿಂಗಳು?' ಎಂದು ಪಿಸುಗುಟ್ಟಿದಳು.

ಮುಂದೊಂದು ದಿನ 'ಹೋಗಮ್ಮ, ನಿನಗೆ ಏನೂ ಗೊತ್ತಾಗಲ್ಲ' ಎಂದು ಪ್ರಿಯಾಳಿಗೆ ಹೇಳುವ ಮಗು, ತನ್ನ ಮಗಳಿಗೆ ಹುಟ್ಟುತ್ತದೆ ಎನ್ನುವ ಕಲ್ಪನೆಯೇ ಅಮ್ಮ ಸುಧಾಳನ್ನು ಪುಳಕಿತಗೊಳಿಸಿತ್ತು. ತಾಯಿಯ ಕೈ ಮಗಳ ಬೆನ್ನನ್ನು ಮೃದುವಾಗಿ ನೇವರಿಸುತ್ತಿತ್ತು.

ಪ್ರತಿಕ್ರಿಯಿಸಿ: **feedback@sudha.co.in**